## ಮೂರು ತಲೆಮಾರು ಹಳೆಯ ಛಾಯಾಚಿತ್ರ

ಮೂರು ತಲೆಮಾರಿನ ಕಥೆ ಹೇಳುವ ಚಿತ್ರವಿದು. ತ.ಸು. ಶ್ಯಾಮರಾಯರು, ಟಿ.ಎಸ್. ವೆಂಕಣ್ಣಯ್ಯ ಸಹೋದರರು. ಆ ಕಾಲದಲ್ಲಿ ಟಿ.ಎಸ್. ವೆಂಕಟಣ್ಣಯ್ಯ ಮತ್ತು ಬಿ.ಎಂ. ಶ್ರೀಕಂಠಯ್ಯ ಅವರನ್ನು ಅಶ್ವಿನಿದೇವತೆಗಳೆಂದು ಕರೆಯುತ್ತಿದ್ದರು. ಟಿ.ಎಸ್. ವೆಂಕಣ್ಣಯ್ಯ ಇವರ ಪರಿಚಯ ಎಲ್ಲರಿಗೂ ಇದೆ. ಕುವೆಂಪು ಮತ್ತು ಜಯಚಾಮರಾಜ ಒಡೆಯರ್ ಅವರ ವಿದ್ಯಾ ಗುರುಗಳೂ ಇವರೇ. 'ಸಂಪೂರ್ಣ ರಾಮಾಯಣ ದರ್ಶನಂ' ಪುಸ್ತಕವನ್ನು ಕುವೆಂಪು ಅವರು ಸಮರ್ಪಿಸಿದ್ದೂ ಇವರಿಗೆ. ಇವರ ಕುಟುಂಬದ ಕುಡಿ ತ.ರಾ.ಸುಬ್ಬರಾಯರು. ನನ್ನ ಮಿತ್ರರೊಬ್ಬರಿಂದ ದೊರೆತ ಈ ಚಿತ್ರವನ್ನು ಆಸಕ್ತಿಯಿಂದ ಅವಲೋಕಿಸಿದಾಗ, ಸ್ವತಂತ್ರ ಪೂರ್ವದಲ್ಲಿ ಚಿತ್ರದುರ್ಗದ ತ್ಯಾಗರಾಜ ಬೀದಿ ಅವರ ಮನೆಯ ಮುಂದೆ ಈ ಚಿತ್ರವನ್ನು ತೆಗೆಸಿದ ವಿಚಾರ ಗೊತ್ತಾಯಿತು.

ಚಿತ್ರದಲ್ಲಿ (ಎರಡದಿಂದ ಬಲಕ್ಕೆ) ಟಿ.ಎಸ್. ಹನುಮಂತರಾವ್, ಟಿ.ಎಸ್. ಕೃಷ್ಣರಾವ್, ಟಿ.ಎಸ್. ವೆಂಕಣ್ಣಯ್ಯನವರು, ಮಧ್ಯ ತಾಯಿ ಲಕ್ಷ್ಮಮ್ಮ, ಟಿ.ಎಸ್. ರಾಮಸ್ವಾಮಯ್ಯ, (ತ.ರಾ.ಸು. ಅವರ ತಂದೆ), ಟಿ.ಎಸ್. ಲಕ್ಷ್ಮಣರಾವ್, ತ.ಸು. ಶ್ಯಾಮರಾಯರು. ಏಳು ಜನ ಗಂಡು ಮಕ್ಕಳಲ್ಲಿ ಒಬ್ಬ ಮಗನನ್ನು ದತ್ತು ಕೊಟ್ಟಿದ್ದರಂತೆ ಕುಳಿತಿರುವವರಲ್ಲಿ ಒಬ್ಬಳೇ ತಂಗಿ ಸುಂದರಮ್ಮ (ಕ್ಷೀರಸಾಗರ ಮನಾಮದೇಯ ಬೆಳಗೆರೆ ಸೀತಾರಾಮಶಾಸ್ತ್ರಿಯವರ ಮಡದಿ). ಇದೊಂದು ಸುಂದರ ಸುಸಂಸ್ಕೃತ ಪರಿವಾರ ಕುಟುಂಬ.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ





## 'ನಕಲಿ' ಅಲ್ಲ 'ಅಸಲಿ'!

ಭಾರತದಲ್ಲಿ ಪ್ರವಾಸೋದ್ಯಮ, ಅವಕಾಶ ಇದ್ದಷ್ಟು ಬೆಳೆಯದೇ ಇರಲು ನಕಲಿ ವಸ್ತುಗಳ ಮಾರಾಟ ಹೇರಳವಾಗಿರುವುದೂ ಒಂದು ಕಾರಣ! ಔಷಧಿಯಿಂದ ಹಿಡಿದು ಮದ್ಯದವರೆಗೂ ನಕಲಿ. ನಕಲಿ ನೋಟುಗಳ ಹಾವಳಿ ಅದು ನಿನ್ನೆ ಮೊನ್ನೆಯದಲ್ಲ! ನಕಲಿ ಪೊಲೀಸ್, ನಕಲಿ ಆರ್.ಟಿ.ಒ., ನಕಲಿ ಶಿಕ್ಷಕ, ಒಂದೇ ಎರಡೇ ನೂರಾರು. ಹೆಸರಾಂತ ಬ್ರಾಂಡ್‌ಗಳ ನಕಲಿ ವಸ್ತುಗಳು ಎಲ್ಲೆಲ್ಲೂ ಸಿಗುತ್ತವೆ. ಇಂತಹ ಸಂದರ್ಭಗಳಲ್ಲಿ ಗ್ರಾಹಕ ಎಲ್ಲವನ್ನು ಸಂಶಯದಿಂದ ನೋಡುವುದು ಅನಿವಾರ್ಯ.

ಅನೇಕ ನಗರಗಳಲ್ಲಿ ಇದೇ ಕಾರಣಕ್ಕೆ ಹಸುವನ್ನೇ ಮನೆಗೆ ತಂದು ಹಾಲು ಕರೆದು ಕೊಡುವುದನ್ನು ಕಾಣುತ್ತೇವೆ! ನಮ್ಮ ಕಣ್ಣೆದುರಿಗೆ ಗಾಣದಲ್ಲಿ ಕೊಬ್ಬರಿ ಎಣ್ಣೆಯನ್ನೋ, ಶೇಂಗಾ ಎಣ್ಣೆಯನ್ನು ತೆಗೆಯುವುದನ್ನು ನೋಡುತ್ತೇವೆ! ಅಂತೆಯೇ ಜೇನುತುಪ್ಪದ ಕಥೆಯೂ ಕೂಡ. ಅದಕ್ಕಾಗಿಯೇ ಗ್ರಾಹಕರಲ್ಲಿ ವಿಶ್ವಾಸ ಮೂಡಿಸಲು ಜೇನುತುಪ್ಪದ ವ್ಯಾಪಾರಿಯೊಬ್ಬ ಜೇನು ಹುಟ್ಟುಗಳ ಸಮೇತ ಪೇಟೆಗೆ ಬಂದಿದ್ದಾನೆ! ಈಗಲೂ ವಿಶ್ವಾಸ ಮೂಡದೇ ಇದ್ದರೆ ದೇವರೇ ಕಾಪಾಡಬೇಕು!

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ




## ಕಾಯಿಲೆಗೊಂದು ದೇವತೆ

ಸಿಡುಬಮ್ಮ, ದಡಾರದಮ್ಮ, ಸುಂಕಲೆಮ್ಮ, ತೊಟ್ಟಮ್ಮ, ಕೆಮ್ಮಮ್ಮ, ಗೊಬ್ಬರದಮ್ಮ, ಉಡಗಲ್ಲಮ್ಮ, ಮೈಲಮ್ಮ ಈ ಹೆಸರುಗಳನ್ನು ಕೇಳಿದರೆ ವಿಚಿತ್ರವೆನಿಸುತ್ತದೆ. ಯಾಕೆಂದರೆ, ಇವುಗಳೆಲ್ಲ ಸಾಂಕ್ರಾಮಿಕ ರೋಗಗಳ ಹೆಸರುಗಳು. ಈ ಸಾಂಕ್ರಾಮಿಕ ರೋಗಗಳನ್ನು ಹೋಗಲಾಡಿಸಿಕೊಳ್ಳಲು ದೇವರ ಮೊರೆ ಹೋದ ಹಿನ್ನೆಲೆ ನಮ್ಮಲ್ಲಿದೆ. ಅದರ ತಾಜಾ ನಿದರ್ಶನ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕೆಂಗೊಂಡ ಗ್ರಾಮದಲ್ಲಿ ಇರುವ ಈ ದೇವರುಗಳ ಹೆಸರಿನಲ್ಲಿ ದೇವಸ್ಥಾನವನ್ನು ಕಟ್ಟಲಾಗಿದೆ. ಒಂದೇ ದೇವಸ್ಥಾನದಲ್ಲಿ ಎಂಟು ದೇವರುಗಳ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ.

ದಡಾರ, ಸಿಡುಬು, ಕೆಮ್ಮು, ಸುಂಕ, ಮೈಲಿ, ದಡಾರ, ತೊಟ್ಟಮ್ಮ, ಗೊಬ್ಬರ ಆದಂತಹ ಸಂದರ್ಭದಲ್ಲಿ ತಲೆಯ ಮಲೆ ನೀರು ಹಾಕಿಕೊಂಡು ಜಳಕ ಮಾಡಿ, ಮಡಿಉಡಿಯಿಂದ ದೇವರಿಗೆ ಉಪ್ಪು, ಹುಣಸೆಹಣ್ಣು, ಮೆಣಸಿನಕಾಯಿ ಅರ್ಪಿಸಿದರೆ ಈ ಕಾ ಯಿಲೆಗಳಿಂದ ಮುಕ್ತರಾಗುತ್ತಾರೆ ಎಂಬ ನಂಬಿಕೆ ಈ ಭಾಗದಲ್ಲಿದೆ.

—ಮಲ್ಲಪ್ಪ ಫ. ಕರೇಣ್ಣನವರ, ಮೋಟೆಬೆನ್ನೂರು


## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ವಿಳಾಸ: editorsu@sudha.co.in

@SudhaWeekly